# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ: | 398 (456) |
| ಉತ್ತರಿಸಬೇಕಾದ ದಿನಾಂಕ: | 30.01.2026 |
| ಸದಸ್ಯರ ಹೆಸರು: | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು: | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇ-ಸ್ವತ್ತು 2.0 ತಂತ್ರಾಂಶ ಜಾರಿಯಾದ ದಿನಾಂಕದಿಂದ ಈವರೆಗೆ ವಿತರಿಸಲಾದ ಇ-ಸ್ವತ್ತು ನಮೂನೆ 9, 11ಎ ಹಾಗೂ 11ಬಿ ಖಾತೆಗಳ ಸಂಖ್ಯೆ ಎಷ್ಟು; ಎಷ್ಟು ಜಿಲ್ಲೆಗಳಲ್ಲಿ ಇ-ಸ್ವತ್ತು ನಮೂನೆ ಮೂಲಕ ವಿತರಣೆ ಮಾಡಲಾಗಿದೆ; ಪ್ರಸ್ತುತ ಇ-ಸ್ವತ್ತು ನಮೂನೆಗಳ ವಿತರಣೆ ಸಂಖ್ಯೆಯಲ್ಲಿ ಕಡಿಮೆಯಾಗಲು ಕಾರಣಗಳೇನು; | ಇ-ಸ್ವತ್ತು 2.0 ತಂತ್ರಾಂಶದಡಿ ಸಾರ್ವಜನಿಕರಿಂದ ಇದುವರೆಗೆ ಒಟ್ಟು **44,508** ಅರ್ಜಿಗಳು ಸ್ವೀಕೃತವಾಗಿವೆ. ಇದರಲ್ಲಿ ಹೊಸ ತಂತ್ರಾಂಶದ ಮೂಲಕ **21,037** ಅರ್ಜಿಗಳು ಹಾಗೂ ಹಳೆ ತಂತ್ರಾಂಶದ ಮೂಲಕ **23,471** ಅರ್ಜಿಗಳು ಸಲ್ಲಿಕೆಯಾಗಿದೆ. ಇದುವರೆಗೆ ಇ-ಸ್ವತ್ತು 2.0 ತಂತ್ರಾಂಶದಡಿ ಒಟ್ಟು 7978 ಅರ್ಜಿಗಳು ಅನುಮೋದನೆಗೊಂಡು ವಿಲೇವಾರಿ ಮಾಡಲಾಗಿದೆ.<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಇ-ಸ್ವತ್ತು 2.0 ತಂತ್ರಾಂಶ ಜಾರಿಯಾದ ಬಳಿಕ ಜಿಲ್ಲಾ ಪಂಚಾಯತಿ ಕಚೇರಿಗಳಲ್ಲಿ ಹಾಗೂ ಹೆಲ್ಪ್ ಲೈನ್‌ಗಳ ಮೂಲಕ ಸ್ವೀಕೃತವಾದ ಒಟ್ಟು ದೂರುಗಳೆಷ್ಟು; ಆ ಪೈಕಿ ಪರಿಹಾರ ಒದಗಿಸಲಾಗಿರುವ ದೂರುಗಳ ಸಂಖ್ಯೆ ಎಷ್ಟು; ಪರಿಹರಿಸಲು ಬಾಕಿ ಇರುವ ದೂರುಗಳೆಷ್ಟು; | ರಾಜ್ಯ ಮಟ್ಟದಲ್ಲಿ ಅನುಷ್ಠಾನ ಮಾಡಿರುವ ಇ-ಸ್ವತ್ತು ಸಹಾಯವಾಣಿಯಲ್ಲಿ ಬಂದಂತ ಮತ್ತು ಸ್ವೀಕರಿಸಲಾದ ದೂರವಾಣಿ ಕರೆಗಳ ವಿವರಗಳು ಅನುಬಂಧ-2 ರಲ್ಲಿ ಲಗತ್ತಿಸಿದೆ.<br>ಆ ಪೈಕಿ 336 ತಾಂತ್ರಿಕ ದೂರುಗಳು ಸಹಾಯವಾಣಿಯಲ್ಲಿ ನೋಂದಣಿಯಾಗಿದ್ದು, 237 ತಾಂತ್ರಿಕ ದೂರುಗಳನ್ನು ಈವರೆಗೆ ಸರಿಪಡಿಸಲಾಗಿದೆ. |
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇ-ಸ್ವತ್ತು 2.0 ತಂತ್ರಾಂಶದ ತಾಂತ್ರಿಕ ದೋಷಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾದ ದೂರುಗಳಿಗೆ ಯಾವ ರೀತಿಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ; ಸಮಸ್ಯೆಗಳನ್ನು ಬಗೆಹರಿಸಲು ಯಾವ ಕಾಲಮಿತಿಯನ್ನು ನಿಗದಿಪಡಿಸಿದೆ; | ಅದರಂತೆ, ಕೆಳಗಿನ ಪ್ರಮುಖ ಸಮಸ್ಯೆಗಳು ಕಂಡುಬಂದಿವೆ.<br>• ಇ-ಸ್ವತ್ತು 2.0 ತಂತ್ರಾಂಶದಲ್ಲಿ ನಮೂನೆ–11ಬಿ ಖಾತೆಗಳನ್ನು ನಮೂನೆ–11ಎ ಗಳಾಗಿ ಪರಿವರ್ತನೆಗೆ ಅವಕಾಶ<br>• ಹೊಸ ಬಡಾವಣೆಗಳು ಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ |

| | | |
|---|---|---|
| | | • KIADB ಆಸ್ತಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ<br>• ಇ-ಸ್ವತ್ತು ತಂತ್ರಾಂಶದ Citizen Interface ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಗುಂಟೆ ಮತ್ತು Cents ನಲ್ಲಿರುವ ವಿಸ್ತೀರ್ಣವನ್ನು ಚ.ಮೀ ನಲ್ಲಿ ಪರಿವರ್ತಿಸಲು ಅವಕಾಶ<br>ಉಳಿದಂತೆ ಈ ಕೆಳಗಿನ ಸಣ್ಣಪುಟ್ಟ ಸಮಸ್ಯೆಗಳು ಉಂಟಾಗುತ್ತಿರುವುದು ಗಮನಕ್ಕೆ ಬಂದಿದೆ.<br><br>1. ಋಣಭಾರ ಪತ್ರಗಳನ್ನು fetch ಆಗದೇ ಇರುವುದು<br>2. ಅರ್ಜಿಗಳನ್ನು ಆನ್-ಲೈನ್ ಮೂಲಕ ಸಲ್ಲಿಸುವಾಗ ಎದುರಾದ ತಾಂತ್ರಿಕ ಸಮಸ್ಯೆಗಳು<br>3. ಇ-ಖಾತಾ ಪ್ರಮಾಣಪತ್ರ ದಲ್ಲಿರುವ ತಾಂತ್ರಿಕ ಲೋಪದೋಷಗಳು<br>4. ಹುಕ್ಕೇರಿ ಎಸ್ಕಾಂ ನೊಂದಿಗೆ ಸಂಯೋಜನೆ<br>5. ಇನ್ನೂ ಮುಂತಾದವು<br>ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಮುಂದಿನ ದಿನಗಳಲ್ಲಿ ಬಗೆಹರಿಸಲು ಕ್ರಮವಹಿಸಲಾಗುತ್ತಿದೆ. |
| ಈ) | ಇ-ಸ್ವತ್ತು ಜಾರಿಯದಾಗಿನಿಂದ ಈವರೆಗೆ ಕಡಿಮೆ ರಸ್ತೆ ಅಗಲ, ಜಾಗದ ಮಾಲಿಕತ್ವ, ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಭೂಪರಿವರ್ತನೆ ಮಾಡಲಾಗದೆ ಕೃಷಿ ಭೂಮಿಯಲ್ಲಿ ನಿರ್ಮಾಣಗೊಂಡು ಕಟ್ಟಡ ಸಂಖ್ಯೆ/ವಿದ್ಯುತ್ ಸಂಪರ್ಕ ಪಡೆದಿದ್ದರೂ ಆಸ್ತಿ ದಾಖಲೆಯಿಲ್ಲದ ಮನೆಗಳು/ಕಟ್ಟಡಗಳಿಗೆ ನಮೂನೆ 11ಬಿ ಖಾತೆ ನೀಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಇಂತಹ ಆಸ್ತಿಗಳನ್ನು ತಂತ್ರಾಂಶದಲ್ಲಿ ದಾಖಲಿಸಲು ಯಾವಾಗ ಕಲ್ಪಿಸಲಾಗುವುದು ಇವುಗಳನ್ನು ಅಧಿಕೃತ ಆಸ್ತಿಗಳಾಗಿ ಪರಿವರ್ತಿಸಲು ನೀತಿ/ಯೋಜನೆಗಳಾವುವು | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) 2025 ರ ಅನ್ವಯ ದಾಖಲೆಗಳನ್ನು ಒಳಗೊಂಡಿರುವ ಆಸ್ತಿಗಳಿಗೆ ನಮೂನೆ - 11ಬಿ ಪಡೆಯಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br>ನಮೂನೆ-11ಬಿ ಪಡೆಯಲು ಇ-ಸ್ವತ್ತು 2.0 ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲಾಗಿದ್ದು,<br>ಕೆಲವೊಂದು ತಾಂತ್ರಿಕ ತೊಡಕುಗಳಿದ್ದು, ತುರ್ತಾಗಿ ಪರಿಹರಿಸಲು NIC ರವರಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. |
| ಉ) | ಪ್ರಸ್ತುತ ಇ-ಸ್ವತ್ತು ವ್ಯವಸ್ಥೆಯಡಿ ವಿವಿಧ ಆಸ್ತಿ ವರ್ಗಗಳಿಗೆ ಅನುಗುಣವಾಗಿ ಸಲ್ಲಿಸಬೇಕಾದ ದಾಖಲೆಗಳು ಯಾವುವು; ಈ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗಳು ಪ್ರಾಯೋಗಿಕವಾಗಿ ಹಾಗೂ ಸಮರ್ಪಕವಾಗಿ ವಿತರಿಸುತ್ತಿವೆಯೇ ಇದರಿಂದಾಗಿ | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) 2025 ರ ನಿಯಮ 5 ರ ಅನ್ವಯ ಅನುಬಂಧ -1 ಹಾಗೂ ನಿಯಮ 8 ರ ಅನ್ವಯ ಅನುಬಂಧ-2 |

| | | |
|---|---|---|
| | ತಂತ್ರಾಂಶದಲ್ಲಿ ಉಂಟಾಗಿರುವ ಅಡಚಣೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ರಲ್ಲಿ ವಿವಿಧ ಆಸ್ತಿ ವರ್ಗೀಕರಣದಡಿ ಅವಶ್ಯಕ ದಾಖಲೆಗಳ ಪಟ್ಟಿಯನ್ನು ನೀಡಲಾಗಿರುತ್ತದೆ. (ಅನುಬಂಧ-1 ಮತ್ತು 2 ನ್ನು ಲಗತ್ತಿಸಿದೆ)<br><br>ತಂತ್ರಾಂಶದಲ್ಲಿ ತಾಂತ್ರಿಕ ತೊಡಕುಗಳಿದ್ದು, ತುರ್ತಾಗಿ ಪರಿಹರಿಸಲು NIC ರವರಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. |

ಸಂಖ್ಯೆ: ಗ್ರಾಅಪ/23/ಇಆಡಳಿತ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

## ಪ್ರಶ್ನೆ (ಅ) ಗೆ ಅನುಬಂಧ-01

| ಜಿಲ್ಲೆ | ಇ-ಸ್ವತ್ತು 2.0 ತಂತ್ರಾಂಶದ ಮೂಲಕ ಅನುಮೋದನೆಯಾಗಿರುವ ಇ-ಖಾತೆಗಳ ಸಂಖ್ಯೆ |
|---|---|
| ಉಡುಪಿ | 143 |
| ಉತ್ತರ ಕನ್ನಡ | 35 |
| ಕಲಬುರಗಿ | 194 |
| ಕೊಡಗು | 23 |
| ಕೊಪ್ಪಳ | 148 |
| ಕೋಲಾರ | 419 |
| ಗದಗ | 156 |
| ಚಾಮರಾಜನಗರ | 113 |
| ಚಿಕ್ಕಬಳ್ಳಾಪುರ | 237 |
| ಚಿಕ್ಕಮಗಳೂರು | 189 |
| ಚಿತ್ರದುರ್ಗ | 309 |
| ತುಮಕೂರು | 334 |
| ದಕ್ಷಿಣ ಕನ್ನಡ | 196 |
| ದಾವಣಗೆರೆ | 142 |
| ಧಾರವಾಡ | 315 |
| ಬಳ್ಳಾರಿ | 114 |
| ಬಾಗಲಕೋಟೆ | 154 |
| ಬೀದರ್ | 59 |
| ಬೆಂಗಳೂರು | 1854 |
| ಬೆಂಗಳೂರು ಗ್ರಾಮಾಂತರ | 538 |
| ಬೆಂಗಳೂರು ದಕ್ಷಿಣ | 129 |
| ಬೆಳಗಾವಿ | 127 |
| ಮಂಡ್ಯ | 192 |
| ಮೈಸೂರು | 457 |
| ಯಾದಗಿರಿ | 28 |
| ರಾಯಚೂರು | 146 |
| ವಿಜಯನಗರ | 115 |
| ವಿಜಯಾಪುರ | 145 |
| ಶಿವಮೊಗ್ಗ | 333 |
| ಹಾವೇರಿ | 400 |
| ಹಾಸನ | 234 |
| **ಒಟ್ಟು** | **7978** |

# ಪ್ರಶ್ನೆ (ಆ) ಗೆ ಅನುಬಂಧ-02

| e-Swathu Call report | Dec-25 | Jan-26 |
|---|---|---|
| Total Calls Received | 49202 | 21267 |
| Answered | 24419 | 19363 |
| Call Abandon | 24783 | 1904 |
| Answered % | 50 | 91 |
| Abandon % | 50 | 9 |
| | | |
| **Call Status** | **Dec-25** | **Jan-26** |
| Called to know the Procedure | 13767 | 11074 |
| Documents Enquiry | 3971 | 2460 |
| Fee enquiry | 409 | 323 |
| Application Status | 1032 | 1391 |
| Technical issue | 4414 | 3685 |
| Village details not reflecting in the portal | 124 | 34 |
| Correction Request | 135 | 44 |
| Enquiry about officer | 50 | 14 |
| Property details not Found | 147 | 60 |
| Need to Edit/Cancel Application | 77 | 72 |
| Duplicate Application | 44 | 21 |
| Mutation Related info | 137 | 103 |
| Owner Detail Mismatch | 66 | 58 |
| Wrong Document Upload | 46 | 24 |
| **Grand Total** | **24419** | **19363** |

## ಅನುಬಂಧ -1

(ನಿಯಮ-5)

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 1. | ಗ್ರಾಮ ಠಾಣಾ* | 1. ದಿಶಾಂಕ್/ತಹಶೀಲ್ದಾರರ ಗ್ರಾಮ ಠಾಣಾ ನಕ್ಷೆ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 3.ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕುಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು ಪತ್ರ | ಕಡ್ಡಾಯ |
| 2. | ಸರ್ಕಾರದ ವಸತಿ ನಿಗಮದ ಯೋಜನೆಯ ಮಂಜೂರಾದ ಆಸ್ತಿ* | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ /ನಿಗಮದ/ ಮಂಡಳಿಯ ಮಂಜೂರಾತಿ ಪತ್ರ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 3. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 3. | ಸ್ಥಳೀಯ ಯೋಜನಾ ಪ್ರದೇಶದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ/ಸ್ಥಳೀಯ ಯೋಜನಾ ಪ್ರಾಧಿಕಾರದ ವಿನ್ಯಾಸ ಅನುಮೋದಿತ ಆಸ್ತಿ* | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಪ್ರಾಥಮಿಕ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ /ಅಂತಿಮ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ | ಕಡ್ಡಾಯ |
| | | 3. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4. ನಿವೇಶನ ಹಂಚಿಕೆ ಪತ್ರ/ಸ್ವಾಧೀನ ಪತ್ರ | ಐಚ್ಛಿಕ |
| | | 5. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |

| | | | |
|---|---|---|---|
| 4. | ದಿನಾಂಕ:11.11.2014 ರ ಪೂರ್ವದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ ಗ್ರೂಪ್/ಮಂಡಲ ಪಂಚಾಯತಿಯ ವಿನ್ಯಾಸ ಅನುಮೋದಿತ ಆಸ್ತಿ* | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿರುವ ಬಗ್ಗೆ ಸಕ್ಷಮ ಪ್ರಾಧಿಕಾರದ ದೃಢೀಕರಣ ಪತ್ರ | ಕಡ್ಡಾಯ |
| | | 3. ಗ್ರೂಪ್/ಮಂಡಲ ಪಂಚಾಯತಿಯ ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 5. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ/ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 5. | ಸ್ಥಳೀಯ ಯೋಜನಾ ಪ್ರದೇಶದಲ್ಲಿ ದಿನಾಂಕ:16-11-1992ರ ಪೂರ್ವದಲ್ಲಿ ಗ್ರೂಪ್/ಮಂಡಲ ಪಂಚಾಯಿತಿಯಿಂದ ಅನುಮೋದನೆಯಾಗಿರುವ ಆಸ್ತಿ* | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಹಕ್ಕುಪತ್ರ | ಐಚ್ಛಿಕ |
| | | 3. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 5. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ(ನಮೂದಿಸಿ) | ಐಚ್ಛಿಕ |
| 6. | ಮಂಡಲ ಪಂಚಾಯತಿ ಅವಧಿಯ ಪೂರ್ವದಲ್ಲಿ ನೋಟಿ ಪೈಡ್ ಏರಿಯಾ ಸಮಿತಿಯಲ್ಲಿ ನಿರ್ವಹಿಸಲಾದ ಆಸ್ತಿ/ ಅಧಿಸೂಚಿತ ಪ್ರದೇಶದ ಆಸ್ತಿ* | 1. ಜಮಾಬಂದಿ ರಿಜಿಸ್ಟರ್ / ಮ್ಯುಟೇಷನ್ ರಿಜಿಸ್ಟರ್ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 3. ಇತರೆ ದಾಖಲೆ (ನಮೂದಿಸಿ) | ಐಚ್ಛಿಕ |

| | | | |
|---|---|---|---|
| 7. | ಕೆಐಎಡಿಬಿ/ಕೆಎಸ್ಎಸ್ಐಡಿಸಿ ಕೈಗಾರಿಕಾ ವಿನ್ಯಾಸ ಅನುಮೋದಿತ ಆಸ್ತಿ* | 1. ಕೆಐಎಡಿಬಿ/ಕೆಎಸ್ಎಸ್ಐಡಿಸಿ ಭೂ ಸ್ವಾಧೀನ ಪತ್ರ | ಕಡ್ಡಾಯ |
| | | 2. ಕೈಗಾರಿಕಾ ಪ್ರದೇಶ ನಕ್ಷೆ | ಕಡ್ಡಾಯ |
| | | 3. ಕೈಗಾರಿಕಾ ನಿವೇಶನ ನಕ್ಷೆ | ಕಡ್ಡಾಯ |
| | | 4. ಕೈಗಾರಿಕಾ ನಿವೇಶನ ಹಂಚಿಕೆ ಪತ್ರ | ಕಡ್ಡಾಯ |
| | | 5. ಕೈಗಾರಿಕಾ ಪರವಾನಿಗೆ ಪ್ರಮಾಣ ಪತ್ರ | ಐಚ್ಛಿಕ |
| | | 6. ಪರ್ಮನೆಂಟ್ ರಿಜಿಸ್ಟ್ರೇಷನ್ ಸರ್ಟಿಫಿಕೇಟ್/ಲೆಟರ್ ಆಫ್ ಇನ್ಕಾರ್ಪೋರೇಷನ್ | ಐಚ್ಛಿಕ |
| | | 7. ಋಣಭಾರ ಪ್ರಮಾಣ ಪತ್ರ (ನಮೂನೆ-15) | ಐಚ್ಛಿಕ |
| | | 8. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 8. | ದಿನಾಂಕ:16.11.1992 ರಿಂದ ದಿನಾಂಕ:14-06-2013 ರವರೆಗೆ ಗ್ರಾಮ ಪಂಚಾಯಿತಿ ಅನುಮತಿ ಪತ್ರ/ಅನುಮೋದಿತ ಕಟ್ಟಡ ನಕ್ಷೆಯ ಕಟ್ಟಡ ನಿರ್ಮಿತ ಭೂ ಪರಿವರ್ತಿತ ಆಸ್ತಿ | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣ ಅನುಮತಿ ಪತ್ರ/ಗ್ರಾಮ ಪಂಚಾಯಿತಿ ಅನುಮೋದಿತ ಕಟ್ಟಡ ನಕ್ಷೆ | ಕಡ್ಡಾಯ |
| | | 3. ಋಣಭಾರ ಪ್ರಮಾಣ ಪತ್ರ (ನಮೂನೆ-15) | ಐಚ್ಛಿಕ |
| | | 4. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |

| | | | |
|---|---|---|---|
| 9. | ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಸೆಕ್ಷನ್ 94ಸಿ/ 94ಸಿಸಿ/ 94ರಡಿಯಲ್ಲಿ ಮಂಜೂರಾದ ಆಸ್ತಿ | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ/ಮಂಜೂರಾತಿ ಆದೇಶ/ಪ್ರಮಾಣ ಪತ್ರ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ (ನಮೂನೆ-15/16) | ಕಡ್ಡಾಯ |
| | | 3. ಸೇಲ್ ಡೀಡ್/ ಸ್ವತ್ತಿನ ಕಾರ್ಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ(ನಮೂದಿಸಿ) | ಐಚ್ಛಿಕ |
| 10 | ಪುನರ್ವಸತಿ ಯೋಜನೆಯ ಆಸ್ತಿ* | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ | ಕಡ್ಡಾಯ |
| | | 2. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 3. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 4. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ(ನಮೂದಿಸಿ) | ಐಚ್ಛಿಕ |
| 11. | ನೋಂದಾಯಿತ ಪಾಲುದಾರಿಕೆ ಪತ್ರದಂತೆ ಪೋಡಿ/ಹಿಸ್ಸಾ, ನಂಬರ್ ಪಡೆದ ವೈಯಕ್ತಿಕ ಕುಟುಂಬದ ಆಸ್ತಿ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ)* | 1. ತಹಶೀಲ್ದಾರರ ಹಿಂಬರಹ ಪತ್ರ/ ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಭೂ ಪರಿವರ್ತನಾ ನಕ್ಷೆ/ ಪಹಣಿ ಪತ್ರ | ಕಡ್ಡಾಯ |
| | | 3. ಋಣಭಾರ ಪ್ರಮಾಣ ಪತ್ರ(ನಮೂನೆ-15) | ಐಚ್ಛಿಕ |
| | | 4. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |

| | | | |
|---|---|---|---|
| 12. | ದಿನಾಂಕ: 11.11.2014 ರಿಂದ ದಿನಾಂಕ:10.01.2025ರವರೆಗೆ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ ಗ್ರಾಮ ಪಂಚಾಯಿತಿ ವಿನ್ಯಾಸ ಅನುಮೋದಿತ ಆಸ್ತಿ * | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2.ಪ್ರಾಥಮಿಕ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ/ ಅಂತಿಮ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ | ಕಡ್ಡಾಯ |
| | | 3. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4.ಋಣ ಭಾರ ಪ್ರಮಾಣ ಪತ್ರ(ನಮೂನೆ-15) | ಐಚ್ಛಿಕ |
| | | 5.ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿರುವ ಬಗ್ಗೆ ಸಕ್ಷಮ ಪ್ರಾಧಿಕಾರದ ದೃಢೀಕರಣ ಪತ್ರ | ಕಡ್ಡಾಯ |
| | | 6. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 13. | ಕೇಂದ್ರ ಸರ್ಕಾರ/ರಾಜ್ಯಸರ್ಕಾರ/ಸ್ಥಳೀಯ ಸಂಸ್ಥೆಗಳ ನಿವೇಶನ/ಕಟ್ಟಡ | 1. ಪಹಣಿ ಪತ್ರ | ಐಚ್ಛಿಕ |
| | | 2. ಪರಿತ್ಯಾಜನ ಪತ್ರ | ಐಚ್ಛಿಕ |
| | | 3. ಇತರೆ ದಾಖಲೆಗಳು | ಕಡ್ಡಾಯ |

| | | | |
|---|---|---|---|
| 14. | ಕರ್ನಾಟಕ ಭೂ-ಸುಧಾರಣಾ ಅಧಿನಿಯಮ 1961 ರಪ್ರಕರಣ 38ಎ ರಡಿಯಲ್ಲಿ ಮಂಜೂರಾದ ಆಸ್ತಿ | 1. ಸರ್ಕಾರದ ಹಕ್ಕು ಪತ್ರ/ಸ್ವಾಧೀನ ಪತ್ರ/ಮಂಜೂರಾತಿ ಆದೇಶ/ಪ್ರಮಾಣ ಪತ್ರ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ (ನಮೂನೆ-15/16) | ಕಡ್ಡಾಯ |
| | | 3. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 15. | ನಿಗಮ/ಮಂಡಳಿ/ನಿಯಮಿತ/ಪ್ರಾಧಿಕಾರದ ನಿವೇಶನ/ಕಟ್ಟಡ* | 1. ಭೂ-ಸ್ವಾಧೀನ ಪತ್ರ | ಕಡ್ಡಾಯ |
| | | 2. ವಿನ್ಯಾಸ ನಕ್ಷೆ | ಐಚ್ಛಿಕ |
| | | 3. ಇತರ ದಾಖಲೆಗಳು | ಕಡ್ಡಾಯ |

*** - ವರ್ಗೀಕರಣದಡಿ ಕಟ್ಟಡಗಳಿಗೆ ಸಂಬಂಧಿಸಿದಂತೆ ಕಟ್ಟಡಗಳನಿರ್ಮಾಣದ ಉಪಬಂಧಗಳ / ನಿಯಮಗಳ / ಉಪವಿಧಿಗಳ ಅನುಸಾರ ದಾಖಲೆಗಳನ್ನು ಪರಿಶೀಲಿಸಿ ನಮೂನೆ – 11ಎ ವಿತರಿಸುವುದು.**

**ಅನುಬಂಧ-2**

(ನಿಯಮ-8 )

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 1 | ಮಾದರಿ ಕಟ್ಟಡ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಕೃಷಿ ಜಮೀನಿನಲ್ಲಿನ ಅಥವಾ ಭೂ-ಪರಿವರ್ತಿತ ಜಮೀನಿನಲ್ಲಿನ ಕಟ್ಟಡಗಳು. | 1. ನೋಂದಾಯಿತ ಪ್ರಮಾಣ ಪತ್ರ / ತೆರಿಗೆ ಪಾವತಿ ರಶೀದಿ (ದಿನಾಂಕ: 07.04.2025 ರ ಪೂರ್ವದ್ದು) | ಕಡ್ಡಾಯ |
| | | 2. ವಿದ್ಯುತ್ ಬಿಲ್ (ದಿನಾಂಕ: 07.04.2025 ರ ಪೂರ್ವದ್ದು) | ಕಡ್ಡಾಯ |
| | | 3. RTC | ಕಡ್ಡಾಯ |
| | | 4. ಭೂ- ಪರಿವರ್ತನೆ ಆದೇಶ | ಐಚ್ಛಿಕ |
| | | 5. ಋಣಭಾರ ಪ್ರಮಾಣ ಪತ್ರ (EC) | ಕಡ್ಡಾಯ |
| 2 | ಪರಿವರ್ತಿತ/ ಪರಿವರ್ತನೆಯಿಲ್ಲದ ಅಥವಾ ಕೃಷಿ ಭೂಮಿಯಲ್ಲಿನ ನಿವೇಶನಗಳು. | 1. ನೋಂದಾಯಿತ ಪ್ರಮಾಣ ಪತ್ರ. | ಕಡ್ಡಾಯ |
| | | 2. RTC | ಕಡ್ಡಾಯ |
| | | 3. ಭೂ- ಪರಿವರ್ತನೆ ಆದೇಶ | ಐಚ್ಛಿಕ |
| | | 4. ಋಣಭಾರ ಪ್ರಮಾಣ ಪತ್ರ (EC) | ಕಡ್ಡಾಯ |
| 3 | ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದಿತ ಬಡಾವಣೆಯಲ್ಲಿ ಮಾದರಿ ಕಟ್ಟಡ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ ಅಧಿಭೋಗ ಅಥವಾ ಪೂರ್ಣಗೊಳಿಸಿದ ಪ್ರಮಾಣ ಪತ್ರವನ್ನು ಪಡೆಯದೆ ಸ್ವಾಧೀನಪಡಿಸಿಕೊಂಡ ಕಟ್ಟಡಗಳು. | 1. ನೋಂದಾಯಿತ ಪ್ರಮಾಣ ಪತ್ರ. | ಕಡ್ಡಾಯ |
| | | 2. ಭೂ- ಪರಿವರ್ತನೆ ಆದೇಶ | ಕಡ್ಡಾಯ |
| | | 3. ಬಡಾವಣೆ ವಿನ್ಯಾಸ ಅನುಮೋದಿತ ಆದೇಶ | ಕಡ್ಡಾಯ |
| | | 4. ಅನುಮೋದಿತ ಬಡಾವಣೆ ನಕ್ಷೆ | ಕಡ್ಡಾಯ |
| | | 5.ನಿವೇಶನ ಬಿಡುಗಡೆ ಆದೇಶ | ಕಡ್ಡಾಯ |
| | | 6. ಋಣಭಾರ ಪ್ರಮಾಣ ಪತ್ರ (EC) | ಕಡ್ಡಾಯ |
| 4 | ಬಡಾವಣೆ ವಿನ್ಯಾಸ ಅನುಮೋದನೆಯಿಲ್ಲದ, ಆದರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಉದ್ಯಾನವನ, ನಾಗರೀಕ ಸೌಕರ್ಯ ನಿವೇಶನ, ರಸ್ತೆಗಳನ್ನು ಕರ್ನಾಟಕ ನಗರ ಮತ್ತು | 1. RTC | ಕಡ್ಡಾಯ |
| | | 2. ನೋಂದಾಯಿತ ಪರಿತ್ಯಾಜನಾ ಪತ್ರ | ಕಡ್ಡಾಯ |
| | | 3. ಭೂ-ಪರಿವರ್ತಿತ ಆದೇಶ | ಐಚ್ಛಿಕ |

| | | | |
|---|---|---|---|
| | ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ ಪ್ರಕರಣ 17 ರನ್ವಯ ಗ್ರಾಮ ಪಂಚಾಯಿತಿಗೆ ಉಚಿತವಾಗಿ ಪರಿತ್ಯಾಜನಾ ಪತ್ರದ ಮೂಲಕ ವರ್ಗಾಯಿಸಿರುವ /ವರ್ಗಾಯಿಸಿಕೊಂಡು ಕಂದಾಯ ಭೂಮಿ/ ಭೂ-ಪರಿವರ್ತಿತ ಜಮೀನಿನಲ್ಲಿನ ನಿವೇಶನಗಳು | 4. ಋಣ ಭಾರ ಪ್ರಮಾಣ ಪತ್ರ (EC) | ಕಡ್ಡಾಯ |
| 5. | ಭೂ-ಪರಿವರ್ತಿತ / ಭಾವಿತ ಭೂ-ಪರಿವರ್ತಿತ ಜಮೀನುಗಳು (ಏಕ ನಿವೇಶನ) | ಭೂ-ಪರಿವರ್ತನೆ ಆದೇಶ / ಮಂಜೂರಾತಿ ಆದೇಶ | ಕಡ್ಡಾಯ |